**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 03.07.2021

# ಕೊಲೆ ಮಾಡಿದ ಆರೋಪಿತನ ಬಂಧನ.

ದಿನಾಂಕ: 30.06.2021 ರಂದು ಲಕ್ಕಪ್ಪ ತಂ: ಹಣಮಂತ ವಾಲಿಕಾರ ಸಾ: ಅಡವಿಸೋಮನಾಳ ತಾ: ಮುದ್ದೇಬಿಹಾಳ ಇವರು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪಿರ್ಯಾದಿ ನೀಡಿದ್ದರಲ್ಲಿ ದಿನಾಂಕ: 30-06-2021 ರಂದು ಮುಂಜಾನೆ 10-30 ಗಂಟೆಯ ಸುಮಾರಿಗೆ ಖ್ಯಾತನಡೋಣಿ ತಾಂಡದಲ್ಲಿ ರಾಮಣ್ಣ ಲಮಾಣಿ ಇವರ ಮನೆಯ ಮುಂದೆ ರಸ್ತೆಯ ಮೇಲೆ ನಿಂಗಣ್ಣನು ಬಾಲಪ್ಪ ಹೆಳವರ ಇವನಿಗೆ ತನ್ನ ಮಗಳ ಶಾಲೆ ಫೀ ತುಂಬುವದು ಬಂದಿದೆ ತನ್ನ ಕೈಗಡ ಹಣ ಮರಳಿ ಕೊಡು ಫೀ ತುಂಬಲು ಅನುಕೂಲವಾಗುತ್ತದೆ ಅಂತಾ ಕೇಳಿದಕ್ಕೆ ಸಿಟ್ಟಾಗಿ ಆರೋಪಿತನಾದ ಬಾಲಪ್ಪನು ಸೂಳೆ ಮಗನೇ ಎಲ್ಲಿಬೇಕು ಅಲ್ಲಿ ಹಣಕೇಳಿ ನನ್ನ ಮರ್ಯಾದಿ ಹಾಳಮಾಡಿದಿ, ಸೂಳೆ ಮಗನೇ ನಿನಗೆ ಖಲಾಸ ಮಾಡಿ ಬಿಡುತ್ತೇನೆ ಅಂತಾ ಹಲ್ಕಟ ಬೈದಾಡುತ್ತಾ ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿ ಇದ್ದ ಕುರಿಗೆ ತಾಳದಿಂದ ಜೋರಾಗಿ ನಿಂಗಪ್ಪನ ತಲೆಗೆ ಹೊಡಿದು ಬಾರಿ ಗಾಯ ಪಡಿಸಿದಾಗ ಬಿಡಿಸಲು ಹೋದ ಸಾಕ್ಷಿದಾರ ಜನರಿಗೆ ಹಲ್ಕಟ ಬೈದಾಡಿ ಜೀವದ ಧಮಕಿ ಹಾಕಿದ್ದು, ಗಾಯಾಳು ನಿಂಗಪ್ಪನಿಗೆ ಅಡವಿಸೋಮನಾಳ ಗ್ರಾಮದ ಸರಕಾರಿ ಆಸ್ಪತ್ರೆಯಲ್ಲಿ ಉಪಚಾರ ಮಾಡಿಸಿ ಹೆಚ್ಚಿನ ಉಪಚಾರಕ್ಕೆ ಮುದ್ದೇಬಿಹಾಳಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯ ಮದ್ಯದಲ್ಲಿ ದಿನಾಂಕ: 30.06.2021 ರಂದು 12:30 ಗಂಟೆಗೆ ಅಡವಿ ಸೋಮನಾಳ ಗ್ರಾಮದಲ್ಲಿ ಇರುವ ನೀರಿನ ಟಾಕಿ ಹತ್ತಿರ ಮರಣಹೊಂದಿದ್ದು ಇರುತ್ತದೆ. ಈ ಬಗ್ಗೆ ತಾಳಿಕೋಟಿ ಠಾಣಾ ಗುನ್ನಾ ನಂ. 116/2021 ಕಲಂ: 302, 504, 506 ಐಪಿಸಿ. ನೇದ್ದು ದಾಖಲಾಗಿದ್ದು ಇರುತ್ತದೆ.

ಸದರ ಪ್ರಕರಣದ ತನಿಖೆಯ ಕುರಿತು ಶ್ರೀ ಅನುಪಮ್ ಅಗರವಾಲ್ ಐ.ಪಿ.ಎಸ್, ಪೊಲೀಸ್ ಅಧೀಕ್ಷಕರು ವಿಜಯಪುರ, ಡಾ॥ ರಾಮ ಅರಸಿದ್ದಿ ಕೆ.ಎಸ್.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ವಿಜಯಪುರ ರವರ ಮಾರ್ಗದರ್ಶನದಲ್ಲಿ ಶ್ರೀ ಅರುಣಕುಮಾರ ಕೋಳೂರ, ಪೊಲೀಸ್ ಉಪಾಧೀಕ್ಷಕರು ಬ. ಬಾಗೇವಾಡಿ, ಆನಂದ ವಾಘಮೋಡೆ ಸಿ ಪಿ ಐ ಮುದ್ದೇಬಿಹಾಳ, ವಿನೋದ ದೊಡಮನಿ ಪಿ.ಎಸ್.ಐ [ಕಾ:ಸು] ತಾಳಿಕೋಟಿ ಪಿ ಎಸ್. & ತಾಳಿಕೋಟಿ ಠಾಣೆಯ ಎಮ್ ಕೆ ಡೋಣೂರ ಸಿಎಚ್‌ಸಿ-1322, ಎಮ್ ಎಲ್ ಪಟೇದ ಸಿಎಚ್‌ಸಿ-1214 ಹಾಗೂ ಎಸ್ ಎಮ್ ಚಲವಾದಿ ಸಿಪಿಸಿ-653 ರವರನ್ನೊಳಗೊಂಡ ತನಿಖಾ ತಂಡ ರಚಿಸಿದ್ದು ಇರುತ್ತದೆ.

ಸದರಿ ತನಿಖಾ ತಂಡವು ಈ ಪ್ರಕರಣದಲ್ಲಿಯ ಆರೋಪಿತನಾದ **ಬಾಲಪ್ಪ ತಂ: ಹುಲಗಪ್ಪ ಹೆಳವರ. ಸಾ: ಅಡವಿಸೋಮನಾಳ ತಾ: ಮುದ್ದೇಬಿಹಾಳ** ಇವನಿಗೆ ದಿನಾಂಕ: 02/07/2021 ರಂದು 07-00 ಗಂಟೆಗೆ ಅಡವಿ ಸೋಮನಾಳ ಗ್ರಾಮದಲ್ಲಿ ಹಿಡಿದು ವಿಚಾರಿಸಲಾಗಿ ಸದರಿಯವನು ಗುನ್ನೆ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದರಿಂದ ಸದರಿಯವನಿಗೆ ಸಿ.ಪಿ.ಐ ಮುದ್ದೇಬಿಹಾಳ ದಸ್ತಗೀರ ಮಾಡಿ ಸದರಿಯವನ ಕಡೆಯಿಂದ ಗುನ್ನೆಗೆ ಉಪಯೋಗಿಸಿದ ಮುದ್ದೇಮಾಲನ್ನು ಜಪ್ತ ಮಾಡಿರುತ್ತದೆ.

ಈ ಪ್ರಕರಣ ಪತ್ತೆ ಮಾಡುವಲ್ಲಿ ಯಶಶ್ವಿಯಾದ ತಂಡದ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

ಪೊಲೀಸ್ ಅಧೀಕ್ಷಕರು,
ವಿಜಯಪುರ ಜಿಲ್ಲೆ.

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು